# ತೆಂಕಲುಮೋಳೆ ಗ್ರಾಮಸ್ಥರ ಮುಖದಲ್ಲಿ ನಗೆಯ ಹೊಳೆ

**ತೆಂಕಲುಮೋಳೆ** ಗ್ರಾಮವು ಚಾಮರಾಜನಗರದ ಸಂತೆಮರಹಳ್ಳಿ ಹೋಬಳಿಗೆ ಸೇರಿದೆ. ಅಲ್ಲಿ ೧೨೬ ಬಡ ಕುಟುಂಬಗಳು ವಾಸಿಸುತ್ತಿವೆ. ಈ ಗ್ರಾಮದ ಬಡತನದ ರೇಖೆಗಿಂತ ಕೆಳಗಿರುವ ಗ್ರಾಮಸ್ಥರಿಗೆ ರಾಜೀವ ಗಾಂಧಿ ಗೃಹ ನಿರ್ಮಾಣ ನಿಗಮದ ವತಿಯಿಂದ ಮನೆ ಕಟ್ಟಿಕೊಳ್ಳಲು ಹಣ ಬಿಡುಗಡೆ ಮಾಡಲಾಯಿತು. ಆದರೂ ಫಲಾನುಭವಿಗಳು ಭರಿಸಬೇಕಾದ ತಲಾ ರೂ.೧೫,೦೦೦ ಅನ್ನು ಪಾವತಿ ಮಾಡಲು ಅತ್ಯಂತ ಕಡು ಬಡವರಾದ ಗ್ರಾಮಸ್ಥರಿಗೆ ಸಾಧ್ಯವಾಗಲಿಲ್ಲ.

ಈಗ ಅವರ ಸಹಾಯಕ್ಕೆ ಬಂದವರು, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಹಿರಿಯ ಯತಿಗಳಾದ ಪೂಜ್ಯ ಸ್ವಾಮಿ ಸುರೇಶಾನಂದಜಿ ಮಹಾರಾಜ್ ಅವರು. ಜಿಲ್ಲಾ ಪಂಚಾಯತ್ ಕೂಡ ನೇರವಾಗಿ ಸರ್ಕಾರದ ಹಣವನ್ನು ಶ್ರೀರಾಮಕೃಷ್ಣ ಆಶ್ರಮಕ್ಕೆ ಬಿಡುಗಡೆ ಮಾಡಿತು. ಉಳಿದ ಹಣವನ್ನು ಶ್ರೀರಾಮಕೃಷ್ಣ ಆಶ್ರಮವು ದಾನಿಗಳ ನೆರವಿನಿಂದ ಒದಗಿಸಿತು. ಇದರ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡವರು, ಸ್ವಾಮಿ ವಿವೇಕಾನಂದ ಸೇವಾ ಟ್ರಸ್ಟಿನ ಶ್ರೀ ಮಲ್ಲೇಶ್ ಅವರು.

ಈವರೆಗೆ ಒಟ್ಟು ೭೫ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಶ್ರೀರಾಮಕೃಷ್ಣ ಆಶ್ರಮವು ಈ ಕಾರ್ಯಕ್ಕೆ ರೂ. ೧೨ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿದೆ. ಈ ಯೋಜನೆಗೆ ಉದಾರವಾಗಿ ದಾನ ನೀಡಿದ ಪ್ರಮುಖರೆಂದರೆ, ಅಮೆರಿಕದ ಉತ್ತರ ಕ್ಯಾಲಿಫೋರ್ನಿಯಾ ವೇದಾಂತ ಸೊಸೈಟಿಯ ಮುಖ್ಯಸ್ಥರಾದ ಪೂಜ್ಯ ಸ್ವಾಮಿ ಪ್ರಬುದ್ಧಾನಂದಜಿ ಮಹಾರಾಜ್, ಅಮೆರಿಕದ ಡಾ. ಗೋಪಾಲಕೃಷ್ಣ, ಹಾಸನದ ಡಾ. ದೇವಪ್ರಸಾದ್, ಬೆಂಗಳೂರಿನ ಶ್ರೀ ಎನ್. ನರಸಿಂಹನ್, ಬೆಂಗಳೂರಿನ ಸುದರ್ಶನ ಟ್ರಸ್ಟ್ ಮುಂತಾದವರು. ಮಲ್ಟಿಪ್ಲೆಕ್ಸ್



ಕಂಪನಿಯು ಮನೆಗಳ ನಿರ್ಮಾಣಕ್ಕೆ ಸಿಮೆಂಟ್ ಬ್ಲಾಕ್‌ಗಳನ್ನು ಮತ್ತು ಸಿಮೆಂಟ್ ಮೂಟೆಗಳನ್ನು ಒದಗಿಸಿದೆ.

ಮನೆಕಟ್ಟುವ ಸಂದರ್ಭದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಕೊಂಡು ಸರಬರಾಜು ಮಾಡಿದವರು, ಅದ್ವೈತ್ ಹ್ಯುಂಡಾಯ್ ಕಂಪನಿಯ ಶ್ರೀ ಶಂಕರ್ ಅವರು. ಈ ಮನೆಗಳ ವಿನ್ಯಾಸವನ್ನು ಚಾಮರಾಜನಗರದ ಇಂಜಿನೀರ್ ಆದ ಶ್ರೀ ಮಹದೇವಸ್ವಾಮಿ ಅವರು ಉಚಿತವಾಗಿ ಮಾಡಿಕೊಟ್ಟಿದ್ದಾರೆ.

ನಿರ್ಮಾಣವಾಗಿರುವ ಈ ಮನೆಗಳಿಗೆ ಶೌಚಾಲಯಗಳನ್ನೂ ಸಹ ನಿರ್ಮಿಸಲಾಗುವುದು. ಒಂದು ಶೌಚಾಲಯದ ವೆಚ್ಚ ರೂ. ಆರು ಸಾವಿರ ರೂಪಾಯಿಗಳಾಗುತ್ತವೆ. ಸರ್ಕಾರದ ಅನುದಾನವನ್ನು ಹೊರತು ಪಡಿಸಿ, ಮಿಕ್ಕ ಹಣವನ್ನು ಕೊಡಲು ಬೆಂಗಳೂರಿನ ವಿವೇಕಾನಂದ ಸರ್ವೀಸ್ ಸೊಸೈಟಿ ಮುಂದೆ ಬಂದಿದೆ. ✪

# ರಾಮಕೃಷ್ಣ ಮಿಷನ್ನಿನಿಂದ ನೆರೆಪರಿಹಾರ ಕಾರ್ಯಗಳು

ಇತ್ತೀಚಿನ ಭಾರೀ ಮಳೆ ಮತ್ತು ನೆರೆ, ಪ್ರವಾಹಗಳಿಂದ ಸಂತ್ರಸ್ತರಾದ ಜನರಿಗೆ ರಾಮಕೃಷ್ಣ ಮಿಷನ್ ನೆರವು ನೀಡುತ್ತಿದೆ.

**ಬಿಹಾರ** ರಾಜ್ಯದಲ್ಲಿ ಕಟಿಹಾರ್ ಕೇಂದ್ರದ ಮೂಲಕ, ರೌಪಾಲಿ ಎಂಬಲ್ಲಿ ತಾತ್ಕಾಲಿಕ ಆಶ್ರಯ ಪಡೆದಿದ್ದ ಮಧೇಪುರ ಜಿಲ್ಲೆಯ ೯,೦೦೦ ನಿರಾಶ್ರಿತರಿಗೆ ಪರಿಹಾರ ಸಾಮಗ್ರಿಗಳನ್ನು ಒದಗಿಸಲಾಗಿದೆ. ಮುಜಫರ್‌ಪುರ ಕೇಂದ್ರದ ವತಿಯಿಂದ ಸಹರ್ಸಾ ಮತ್ತು ಮಧೇಪುರ ಪ್ರದೇಶಗಳಲ್ಲಿ ೩೩,೯೮೫ ನಿರಾಶ್ರಿತ ಕುಟುಂಬಗಳಿಗೆ ನೆರವು ನೀಡಲಾಗಿದೆ. ಹಾಗೆಯೇ ಪಾಟ್ನಾ ಕೇಂದ್ರದ ವತಿಯಿಂದ ಅರಾರಿಯಾ, ಪೂರ್ನಿಯಾ, ಸೌಪಾಲ್, ಮಧೇಪುರ ಪ್ರದೇಶಗಳಲ್ಲಿ ೭೬,೦೦೦ ನಿರಾಶ್ರಿತರಿಗೆ ಆಹಾರ, ಶಟ್ಟೆ, ಸೀರೆ ಮುಂತಾದವುಗಳನ್ನು ಕೊಡಲಾಗಿದೆ.

**ಗುಜರಾತಿನ** ಲಿಂಬ್ಡಿ ಕೇಂದ್ರವು ಸುರೇಂದ್ರನಗರ ಜಿಲ್ಲೆಯ ೯೦೦ ಕುಟುಂಬಗಳಿಗೆ ಆಹಾರ ಪದಾರ್ಥಗಳು ಮತ್ತು ಬಟ್ಟೆಗಳನ್ನು ನೀಡಿದೆ.

**ಒರಿಸ್ಸಾದ** ಭುವನೇಶ್ವರ ಕೇಂದ್ರದಿಂದ, ಬಾಲಸೋರ್, ಭದ್ರಕ್, ಜಾಜ್‌ಪುರ್, ಕಟಕ್, ಖುರ್ದಾ, ಪುರಿ ಪ್ರದೇಶಗಳಲ್ಲಿ ೩೧,೧೩೮



ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ನೆರವನ್ನು ನೀಡಲಾಗಿದೆ. ಹಾಗೆಯೇ ಪುರಿಯಲ್ಲಿರುವ ಮಠ ಮತ್ತು ಮಿಷನ್ ಕೇಂದ್ರಗಳಿಂದ ಕ್ರಮವಾಗಿ ೩೭೫ ನಿರಾಶ್ರಿತರಿಗೆ ಮತ್ತು ೧,೦೦೦ ಕುಟುಂಬಗಳಿಗೆ ಪರಿಹಾರ ಸಾಮಗ್ರಿಗಳನ್ನು ವಿತರಿಸಲಾಗಿದೆ.

**ಉತ್ತರ ಪ್ರದೇಶದ** ಲಕ್ನೋ ಕೇಂದ್ರದಿಂದ ಬಕ್ಷಿ ಕಾ ತಾಲಾಬ್ ತಾಲೂಕಿನ ೫,೬೭೪ ನಿರಾಶ್ರಿತರಿಗೆ ಆಹಾರ ಪದಾರ್ಥಗಳು, ಪಂಚೆ, ಸೀರೆ, ಚಾಪೆ ಮೊದಲಾದವುಗಳನ್ನು ಒದಗಿಸಲಾಗಿದೆ. ✪